ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜ್ಯಪಾಲರು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ

ದಿನಾಂಕ : DATE : 09/07/2019

### ರಾಜ್ಯದ ರಾಜಕೀಯ ವಿದ್ಯಮಾನಗಳ ಬಗ್ಗೆ ಕೇಂದ್ರ ಗೃಹ ಇಲಾಖೆಗೆ ವರದಿ

# ಅಖಾಡಕ್ಕೆ ಇಳಿದ ರಾಜ್ಯಪಾಲ

**ವಿಕ ಸುದ್ದಿಲೋಕ** ಬೆಂಗಳೂರು 9/7/19

ಸಚಿವರ ಸಾಮೂಹಿಕ ರಾಜೀನಾಮೆ ಹಾಗೂ ಮೈತ್ರಿ ಸರಕಾರಕ್ಕೆ ಪಕ್ಷೇತರ ಶಾಸಕರು ನೀಡಿದ್ದ ಬೆಂಬಲ ವಾಪಸ್ ಬೆನ್ನಲ್ಲೇ ರಾಜ್ಯಪಾಲ ವಿ.ಆರ್.ವಾಲಾ ಅಖಾಡಕ್ಕೆ ಇಳಿದಿದ್ದು, ರಾಜ್ಯದ ಸಂಪೂರ್ಣ ವಿದ್ಯಮಾನಗಳ ಬಗ್ಗೆ ಕೇಂದ್ರ ಗೃಹ ಇಲಾಖೆಗೆ ವರದಿ ಕಳುಹಿಸಿದ್ದಾರೆ.

13 ಶಾಸಕರ ರಾಜೀನಾಮೆ ಹಾಗೂ ಇಬ್ಬರು ಪಕ್ಷೇತರ ಶಾಸಕರು ಬೆಂಬಲ ವಾಪಸ್ ಪಡೆದಿರುವುದರಿಂದ ರಾಜ್ಯ ಸರಕಾರ ಅಲ್ಪಮತಕ್ಕೆ ಕುಸಿದಿದೆ. ಹೀಗಾಗಿ ಪ್ರಮುಖ ನಿರ್ಣಯ ತೆಗೆದುಕೊಳ್ಳುವುದಕ್ಕೆ ಈ ಸರಕಾರಕ್ಕೆ ಅಧಿಕಾರವಿದೆಯೇ ? ಒಂದೊಮ್ಮೆ ಅಂಥ ಸಾಹಸಕ್ಕೆ ಕೈ ಹಾಕಿದರೆ ಅದು ಸಂವಿಧಾನ ಬದ್ಧವೇ ? ಎಂಬಿತ್ಯಾದಿ ವಿಚಾರಗಳ ಬಗ್ಗೆ ರಾಜ್ಯಪಾಲರು ಕಾನೂನು ತಜ್ಞರ ಜತೆ ಚರ್ಚೆ ನಡೆಸಿದ ಬಳಿಕ ಕೇಂದ್ರಕ್ಕೆ ವರದಿ ಕಳುಹಿಸಿದ್ದಾರೆ. ಪರಿಸ್ಥಿತಿಯನ್ನು ಅವಲೋಕಿಸಿ ವಿಶ್ವಾಸ ಮತ ಸಾಬೀತುಪಡಿಸುವಂತೆ ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗೆ ರಾಜ್ಯಪಾಲರು ಸೂಚನೆ ನೀಡುವ ಸಾಧ್ಯತೆ ಹೆಚ್ಚಿದೆ ಎಂದು ರಾಜಭವನ ಮೂಲಗಳು ತಿಳಿಸಿವೆ.

**ಮುಂದೂಡಿಕೆ ಅಸಾಧ್ಯ**

ಶುಕ್ರವಾರದಿಂದ ಆರಂಭವಾಗಲಿರುವ ರಾಜ್ಯ ವಿಧಾನ ಮಂಡಲ ಅಧಿವೇಶನ ಮುಂದೂಡುವಂತೆ ಸರಕಾರ



ಮನವಿ ಮಾಡಬಹುದು. ಆದರೆ ಈ ಮನವಿಗೆ ರಾಜ್ಯಪಾಲರಿಂದ ಮನ್ನಣೆ ಸಿಗುವುದು ಅನುಮಾನ. ನಿಯಮ ಪ್ರಕಾರ ಅಧಿವೇಶನ ಕರೆಯುವುದಕ್ಕೆ ಸಂಪುಟದ ಒಪ್ಪಿಗೆ ಪಡೆದು ಕಡತವನ್ನು ರಾಜ್ಯಪಾಲರಿಗೆ ಕಳುಹಿಸಿಕೊಡಬೇಕು. ಅದೇ ರೀತಿ ಅಧಿವೇಶನ ಮುಂದೂಡುವುದಕ್ಕೂ ಇದೇ ಕ್ರಮ ಅನುಸರಿಸಬೇಕು. ಆದರೆ ಸಂಪುಟ ಸಭೆ ನಡೆಸದೇ ಅಧಿವೇಶನ ಮುಂದೂಡುವಂತೆ ಸಿಎಂ ಕುಮಾರಸ್ವಾಮಿ ಮನವಿ ಮಾಡಿದರೂ ಕ್ರಮಬದ್ಧವಲ್ಲ ಎಂದು ಹೇಳಲಾಗುತ್ತಿದೆ. ಜತೆಗೆ 15 ಶಾಸಕರು ಸರಕಾರದ ಮೇಲೆ ವಿಶ್ವಾಸವಿಲ್ಲ ಎಂದು ಖುದ್ದು ಹೇಳಿಕೆ ನೀಡಿರುವುದರಿಂದ ರಾಜ್ಯಪಾಲರು ಈ ಮನವಿ ಒಪ್ಪುವ ಸಾಧ್ಯತೆ ಕಡಿಮೆ ಎಂದು ತಿಳಿದು ಬಂದಿದೆ.

**ಪ್ರತಿ ದಿನವೂ ವರದಿ ರವಾನೆ**

ರಾಜ್ಯದಲ್ಲಿ ಅನಿಶ್ಚಿತ ಪರಿಸ್ಥಿತಿ ನಿರ್ಮಾಣವಾದ ದಿನದಿಂದಲೂ ಕೇಂದ್ರ ಗೃಹ ಇಲಾಖೆಗೆ ರಾಜ್ಯಪಾಲರು ವರದಿ ನೀಡುತ್ತಿದ್ದಾರೆ ಎಂದು ಮೂಲಗಳಿಂದ ತಿಳಿದು ಬಂದಿದೆ. ತಮ್ಮನ್ನು ಭೇಟಿ ಮಾಡಿದ ಶಾಸಕರು ನೀಡಿದ ಎಲ್ಲ ಹೇಳಿಕೆಗಳನ್ನು ರಾಜ್ಯಪಾಲರ ಕಚೇರಿ ವಿಡಿಯೋ ಚಿತ್ರೀಕರಣಗೊಳಿಸಿದೆ. ಈ ಸಂದರ್ಭದಲ್ಲಿ ರಾಜೀನಾಮೆ ಸಲ್ಲಿಕೆ ಬಗ್ಗೆ ಸ್ಪೀಕರ್ ಕಚೇರಿ ನೀಡಿದ ಸ್ವೀಕೃತಿ ಪತ್ರದ ವಿಚಾರವನ್ನೂ ಕೇಂದ್ರಕ್ಕೆ ಕಳುಹಿಸಿದ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಇದೆಲ್ಲದರ ಮಧ್ಯೆ ಸಂವಿಧಾನಿಕ ಹುದ್ದೆ ನಿರ್ವಹಣೆ ವಿಚಾರದಲ್ಲಿ ಸ್ಪೀಕರ್ ರಮೇಶ್ ಕುಮಾರ್ ನಡೆದುಕೊಂಡ ರೀತಿಯ ಬಗ್ಗೆಯೂ ಕೆಲ ಶಾಸಕರು ರಾಜ್ಯಪಾಲರ ಬಳಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶಾಸಕರು ಸ್ಪೀಕರ್ ಭೇಟಿಗೆ ಸಮಯ ಕೋರಿ ಬರಬೇಕೆಂದು ವಾದಿಸುವುದರಲ್ಲಿ ಅರ್ಥವಿಲ್ಲ. ಸಂವಿಧಾನಿಕ ಹುದ್ದೆ ನಿರ್ವಹಿಸುವವರು ತಮ್ಮ ಹುದ್ದೆಯನ್ನು ಖಾಲಿ ಬಿಡುವಂತೆಯೇ ಇಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಲಾಗಿದೆ.